# ಇದು ಚಿತ್ರಗೀತೆಗಳ ಸಮಯ

ಭಾರತೀಯ ರಂಗಭೂಮಿಯ ದೊಡ್ಡ ಕೊಡುಗೆ ಎಂದರೆ ಇಲ್ಲಿನ ನೆಲಕ್ಕೇ ವಿಶಿಷ್ಟವಾದ ಸಿನಿಮಾ ಹಾಡುಗಳು. ಭಾರತದ ಮೊದಲ ಸಿನಿಮಾಗಳು ಈ ಹಿಂದೆ ನಾಟಕಗಳ ವಸ್ತುಗಳಾಗಿದ್ದ ಪೌರಾಣಿಕ, ಐತಿಹಾಸಿಕ, ಸಂತಕತೆಗಳ ವಿಸ್ತರಣೆಯೇ ಆಗಿದ್ದವು. ಈ ಕತೆಗಳನ್ನು ಆಧರಿಸಿದ್ದರಿಂದ ಸಹಜವಾಗಿ ರಂಗಭೂಮಿಯ ಗೀತ ಸಂಗೀತ ಚಿತ್ರಗೀತೆಗಳಿಗೆ ದಾರಿ ಮಾಡಿಕೊಟ್ಟಿತು. ಬಳಿಕ ಅವು ತಮ್ಮದೇ ಭಿನ್ನ ಅಸ್ತಿತ್ವವನ್ನು, ಆಕಾರವನ್ನು ಪಡೆದುಕೊಂಡವು. ಭಾವನಾತ್ಮಕವಾಗಿ ಜನರನ್ನು ಬೆಸೆಯುವಲ್ಲಿ ಈ ಸುಮಧುರ ಚಿತ್ರಗೀತೆಗಳ ಕೊಡುಗೆ ದೊಡ್ಡದಾಗಿದೆ. ಅವನ್ನು ನಿರ್ಲಕ್ಷಿಸಿ ಮುಂದಕ್ಕೆ ಹೋಗುವುದು ಸಾಧ್ಯವಿಲ್ಲ. ಏಕೆಂದರೆ, ಸಿನಿಮಾ ಕೂಡ ಭಾರತೀಯರ ಒಂದು ಧರ್ಮವಷ್ಟೆ?

ಚಿತ್ರಗೀತೆಗಳನ್ನು ಕೇಳಿ ಪರವಶರಾಗದವರು ತೀರ ಕಡಿಮೆ. ಆದ್ದರಿಂದ ಎಲ್ಲರಲ್ಲೂ ಅವರದೇ ಆಯ್ಕೆಯ ಚಿತ್ರಗೀತೆಗಳ ಪಟ್ಟಿಯೊಂದು ಇರುತ್ತದೆ. ಅದರ ಭಾವೋದ್ದೀಪಕ ಅಂಶ ಕೇಳುಗರ ಮನದಲ್ಲಿ ಆ ಕ್ಷಣವೇ ಭಾವನೆಗಳ ಅಲೆಗಳನ್ನು ಎಬ್ಬಿಸುತ್ತದೆ. ರುಚಿಯಾದ ತಿನಿಸಿನಂತೆ ಕೆಲ ಕಾಲ ನಾಲಿಗೆಯ ಮೇಲೆ ಹೊರಳುವಂತೆ ಮಾಡುತ್ತದೆ. ಸಂಗೀತದಲ್ಲಿ ರುಚಿ ಇರಲಿ, ಬಿಡಲಿ ಚಿತ್ರಗೀತೆಗಳ ಅಭಿಮಾನಿಗಳು, ಕೇಳುಗರು, ಗುನುಗುವವರು ಎಲ್ಲೆಡೆ ಇದ್ದಾರೆ. ಅದು ಏಕಾಂತದ, ವಿಷಾದದ, ಆನಂದದ, ರೋಮಾಂಚನದ ಗಳಿಗೆಗಳಲ್ಲಿ ಅವರ ಕೈಹಿಡಿದು ನಡೆಸಿರುತ್ತದೆ. ಯಾವ ಮೇಧಾವಿ, ಗುರು ಹೇಳಿದ ಮಾತು ತಕ್ಷಣಕ್ಕೆ ನೆನಪಿಗೆ ಬರದೇ ಇದ್ದರೂ ರಾಜ್‌ಕುಮಾರ್, ಎಸ್‌ಪಿಬಿ, ಎಸ್. ಜಾನಕಿ ಅವರ ಧ್ವನಿ ಮನದ ಪರದೆಯ ಮೇಲೆ ಮೂಡುತ್ತದೆ; ತುಟಿ ಅಂಚಿಗೆ ಬಂದ ನಾದಮಯ ಸಾಲುಗಳು ಜೀವಕ್ಕೆ ಚೈತನ್ಯ ತರುತ್ತವೆ. ಹಾಡುಗಳಿಗೆ ಇರುವ ಮಾಯಕ ಗುಣ ಅದು. ಹಾಗಾಗಿ ಈ ಹಾಡುಗಳನ್ನು ಸಿನಿಮಾ, ಅದರ ಕತೆಯ ಜೊತೆಗೇ ಇಡುವ ಅಗತ್ಯವೇನಿಲ್ಲ. ಉತ್ತಮ ಚಿತ್ರಗೀತೆಗಳು ತಮ್ಮನ್ನು ಸೃಷ್ಟಿಸಿದ ಸಿನಿಮಾದ ಹೊರತಾಗಿಯೂ ಹೊರ ಜಗತ್ತಿನಲ್ಲಿ ಜೀವಿಸಬಲ್ಲವು.



ಚಿತ್ರಗೀತೆಗಳ ಈ ಅದ್ಭುತ, ಮಾಯವೀ ಶಕ್ತಿ ಸರ್ವಶ್ರೇಷ್ಠವೆಂದು ಭ್ರಮಿಸಬೇಕಿಲ್ಲ. ಭಾರತೀಯರ ಬದುಕಿನಲ್ಲಿ ಬಹುಬೇಗ ಸಿನಿಮಾ ಜಾಗಪಡೆಯಿತು. ಅದರ ಓಟದ ರಭಸಕ್ಕೆ ಕತೆ ಹೇಳುವ ಸ್ಥಳೀಯ ದೃಶ್ಯಕಲೆಗಳು ಹಿಂದಕ್ಕೆ ಸರಿದು ದಾರಿಮಾಡಿಕೊಡಬೇಕಾಯಿತು. ಒಂದೆಡೆ ಅದು ಭಾರತದ ವೈವಿಧ್ಯಮಯ ಜನಪದ ಹಾಡು – ಸಂಗೀತಗಳ ಬೆಳವಣಿಗೆಗೆ ಅಡ್ಡಿಯಾಯಿತು. ಅದರ ಮೋಹಕಪಾಶಕ್ಕೆ ಹಲವು ಕಲೆಗಳು ಸಿಲುಕಿ ಉಸಿರಾಡಲೂ ಕಷ್ಟಪಟ್ಟವು. ಹಾಗಿದ್ದರೂ ಚಿತ್ರಗೀತೆಗಳು ನಮ್ಮ ನುಡಿಗಟ್ಟನ್ನು, ಭಾವಲೋಕವನ್ನು ರೂಪಿಸಿವೆ, ಪೊರೆದಿವೆ.

ಜನಮಾನಸವನ್ನು ಹಲವು ಬಗೆಯಲ್ಲಿ ಆವರಿಸಿಕೊಂಡ ಚಿತ್ರಗೀತೆಗಳ ಕುರಿತಾದ ವಿಶೇಷ ಸಂಚಿಕೆ ಇದು. ಇದರಲ್ಲಿ ಕನ್ನಡ ಸಿನಿಮಾ ರಂಗದಲ್ಲಿ ಕೆಲಸ ಮಾಡುತ್ತಿರುವ ಪ್ರತಿಭಾವಂತ ಸ್ವರಸಂಯೋಜಕರು, ಗೀತರಚನಕಾರರು ತಮ್ಮ ಕಸುಬಿನ ಬಗ್ಗೆ ಮಾತನಾಡಿದ್ದಾರೆ. ಕನ್ನಡಕ್ಕೆ ಉತ್ತಮ ಹಾಡುಗಳನ್ನು ಕೊಟ್ಟ ಈ 'ಸಿನಿವಂತರ' ಮಾತುಗಳು ಚಿತ್ರಗೀತೆಗಳ ಕಾಣದ ಮುಖವನ್ನು ಓದುಗರಿಗೆ ಪರಿಚಯಿಸುತ್ತವೆ.

**ಸಂದೀಪ ನಾಯಕ**